**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕುಣಿಗಲ್**

**ಉಪಸ್ಥಿತರುಃ**

**ಶ್ರೀಮತಿ ಸುಜಾತ ಎ.ಬಿ.**

**ಬಿ.ಎ.ಎಲ್, ಎಲ್.ಎಲ್.ಬಿ,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ, ಕುಣಿಗಲ್.**

**ಸಿ.ಸಿ.ನಂ.72/2024**

**ಪಿರ್ಯಾದುದಾರರುಃ** ಶ್ರೀ ರಂಗಮೇಸ್ತ್ರೀಗೌಡ ಬಿನ್ ಲೇ. ಚನ್ನತಿಮ್ಮೇಗೌಡ
ವಯಸ್ಸು ಸುಮಾರು 65 ವರ್ಷ,
ವಾಸಃ ವಾರ್ಡ್ ನಂ.2, ಮಲ್ಲಾಘಟ್ಟ ಗ್ರಾಮ,
ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ .

**ವಿರುದ್ಧ**

**ಆರೋಪಿ :** ಶ್ರೀ ಅತಾ ಉಲ್ಲಾ ಷರೀಫ್ ಬಿನ್ ಅಬ್ದುಲ್ ಶುಕೂರ್
ವಯಸ್ಸು ಸುಮಾರು 57 ವರ್ಷ,
ವಾಸಃ 5ನೇ ಕ್ರಾಸ್, ಮದ್ದೂರು ರಸ್ತೆ,
ವಾಸಃ ವಾರ್ಡ್ ನಂ.10, ಕುಣಿಗಲ್ ಟೌನ್,
ತುಮಕೂರು ಜಿಲ್ಲೆ .

**ಆರೋಪಣೆ**

ಈ ಪ್ರಕರಣದಲ್ಲಿ ಆರೋಪಿಯಾದ ನೀವು ಫಿರ್ಯಾದುದಾರ ಪರಿಯಸ್ಥರು ಮತ್ತು ಸ್ನೇಹಿತರಾಗಿದ್ದು ಫಿರ್ಯಾದುದಾರರನ್ನು ಭೇಟಿ ಮಾಡಿ ಕೈಸಾಲ ತೀರುವಳಿಗಾಗಿ ಮತ್ತು ಮರದ ವ್ಯಾಪಾರದ ವ್ಯವಹರಣೆಗಳ ಖರ್ಚಿನ ಉದ್ದೇಶಕ್ಕಾಗಿ ಹಾಗೂ ಕುಟುಂಬದ ನಿರ್ವಹಣೆ ಉದ್ದೇಶಕ್ಕಾಗಿ ತುರ್ತಾಗಿ ಹಣದ ಅವಶ್ಯಕತೆ ಇದೆಯೆಂದು ಫಿರ್ಯಾದುದಾರರಿಂದ ಹಣವನ್ನು ಸಾಲವಾಗಿ ನೀಡುವಂತೆ ಕೇಳಿ ಫಿರ್ಯಾದುದಾರ ಮನೆಯಲ್ಲಿ ದಿನಾಂಕಃ 14.10.2023 ರಂದು ರೂ.1,20,000/-ಗಳನ್ನು ಪಡೆದು ಆ ಸಮಯದಲ್ಲೇ ಚೆಕ್ಕನ್ನು ನೀಡಿ ಎರಡು (02) ತಿಂಗಳ ವಾಯಿದೆಯೊಳಗಾಗಿ ಹಿಂತಿರುಗಿಸುವುದಾಗಿ ಒಪ್ಪಿಕೊಂಡಿರುತ್ತೀರಿ.

ಮುಂದುವರಿದು, ಆರೋಪಿಯಾದ ನೀವು ಹಣ ಪಡೆಯುವ ಸಮಯದಲ್ಲೇ ನೀಡಿದ್ದ ಚೆಕ್ಕನ್ನು ಫಿರ್ಯಾದುದಾರರು ದಿನಾಂಕಃ 14.12.2023 ರಂದು ಕೆನರಾ ಬ್ಯಾಂಕ್ ಕುಣಿಗಲ್ ಶಾಖೆಯ ಚೆಕ್ ನಂ.201880 ನ್ನು ರೂ.1,20,000/-ಗಳನ್ನು (ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳಿಗೆ ಮಾತ್ರ) ನೀಡಿದ್ದು ಸದರಿ ಚಕ್ಕನ್ನು ಫಿರ್ಯಾದುದಾರರು, ಕುಣಿಗಲ್ ಶಾಖೆಯ ಕರ್ನಾಟಕ ಗ್ರಾಮೀಣ ಬ್ಯಾಂಕ್ ಇಲ್ಲಿ ನಗದೀಕರಣಕ್ಕಾಗಿ ದಿನಾಂಕಃ 15.12.2023 ರಂದು ಸಲ್ಲಿಸಿದಾಗ, ಬ್ಯಾಂಕ್‌ನವರು **'Account Closed'** ಎಂಬ ಹಿಂಬರಹದೊಂದಿಗೆ ಸದರಿ ಚೆಕ್ಕನ್ನು ದಿನಾಂಕಃ 16.12.2023 ರಂದು ವಾಪಸ್ಸು ಕಳುಹಿಸಿರುತ್ತಾರೆ.

ನಂತರ ಪಿರ್ಯಾದಿಯು ಅವರ ವಕೀಲರಿಂದ ನೊಂದಾಯಿತ ಅಂಚೆ ಮೂಲಕ ದಿನಾಂಕಃ19.12.2023 ರಂದು ನೋಟೀಸು ಕಳುಹಿಸಿರುತ್ತಾರೆ ಸದರಿ ನೋಟೀಸು ಆರೋಪಿಯಾದ ನಿಮಗೆ ಜಾರಿಯಾಗಿರುತ್ತದೆ. ಆರೋಪಿಯಾದ ನೀವು ಸದರಿ ಹಣವನ್ನು ಮರುಪಾವತಿ ಮಾಡದೇ, ನಿಮ್ಮ ಖಾತೆಯಲ್ಲಿ ಹಣ ಇಲ್ಲದೇ ಇದ್ದರೂ ಸಹ ಚೆಕ್ಕನ್ನು ನೀಡಿ ಫಿರ್ಯಾದುದಾರರಿಗೆ ಮೋಸ ಮಾಡಿರುತ್ತೀರಿ, ಆ ಮೂಲಕ

ಆರೋಪಿಯಾದ ನೀವು ಕಲಂ 138 ಎನ್.ಐ. ಆಕ್ಟ್ ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಹಾಗೂ ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ ಮತ್ತು ಸದರಿ ಆರೋಪಣೆ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**<u>ಆವಾದನೆ (ಪ್ಲೀ)</u>**

**ಪ್ರಶ್ನೆಃ 1.**ಈ ಮೇಲೆ ಓದಿ ಹೇಳಿದ ಆರೋಪಣೆ ನಿನಗೆ ತಿಳಿಯಿತೇ**?**
**ಆರೋಪಿಯ ಉತ್ತರಃ**

**ಪ್ರಶ್ನೆಃ 2.** ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆ ಆಗಬೇಕೋ?
**ಆರೋಪಿಯ ಉತ್ತರಃ**

[ಈ ಆರೋಪಣೆಯನ್ನು ಈ ದಿನ ದಿನಾಂಕ **23.06.2026** ರಂದು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ]

**ಓ.ಹೇ.ಕೇ. ಸರಿ ಇದೆ.**

**Sd/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಕುಣಿಗಲ್.**